
ಕೆ.ವಿ. ತಿರುಮಲೇಶ್

# ಅನೇಕ: ದ ಮಾರ್ಜಿನಲ್ ಮ್ಯಾನ್



1

ಅಂತೂ ತಲಪಿಬಿಟ್ಟೆ! ಅಂತೂ ತಲಪಿಬಿಟ್ಟೆ! ಓ ಗಾಡ್! ದೇವರೇ! ನನ್ನ ಕನಸು ನನಸಾಯಿತು. ಇನ್ನು ನನ್ನ ಜೀವನ ಸಾರ್ಥಕ. ಸಾಧಕರ ಪಟ್ಟಿಯಲ್ಲಿ ನನ್ನ ಹೆಸರು ಬರೆಯುವುದು ಮಾತ್ರ ಬಾಕಿ. ಅದೂ ಅವರೇ ಬರೆಯುತ್ತಾರೆ, ನಾನೇನೂ ಮಾಡಬೇಕಾಗಿಲ್ಲ. ಇಷ್ಟು ದೂರಕ್ಕೇ ನನಗೆ ಕಾಣಿಸುತ್ತಿದೆ: ದೇವದೂತನಂತೆ ವೇಷ ಧರಿಸಿದವನೊಬ್ಬ ಏಣಿ ಹತ್ತಿ ಚಿನ್ನದ ಬಣ್ಣದ ಪೈಂಟಿನಲ್ಲಿ ಒಬ್ಬೊಬ್ಬರ ಹೆಸರನ್ನೇ ಆಕಾಶ ಗಾತ್ರದ ಫಲಕದಲ್ಲಿ ಬರೆಯುತ್ತಿದ್ದಾನೆ. ನಾನು ಆಚೀಚೆ ಖುಷಿಯಿಂದ ನೋಡುತ್ತಿದ್ದೇನೆ: ಅಲ್ಲಿ ಈಗಾಗಲೇ ನನಗೆ ಪರಿಚಯವಿರುವ ಕೆಲವರು ಸೇರಿದ್ದಾರೆ. ಅವರ ಮುಖ ನೋಡುತ್ತೇನೆ; ಅದರೆ ನನ್ನನ್ನು ಗುರುತಿಸುವ ಯಾವ ಸೂಚನೆಯೂ ಇಲ್ಲ. ನನ್ನನ್ನು ಗುರುತಿಸುವುದಕ್ಕೆ ಇನ್ನೇನಾಗಬೇಕು ಇವರಿಗೆ ಎಂದುಕೊಳ್ಳುತ್ತೇನೆ. ಹಿಂದಿನಿಂದಲೂ ನನ್ನನ್ನು ಅಪ್ರಸಿದ್ಧನೆಂದು ಕಡೆಗಣಿಸಿದವರು ಇವರು. ನನ್ನನ್ನು ಮೇನ್‌ಸ್ಟ್ರೀಮಿಗೆ ಎಂದೂ ಬಿಡಲಿಲ್ಲ. ನಾನು ಮಾರ್ಜಿನ್‌ನಲ್ಲೇ ಸಾಧನೆ ಮಾಡುತ್ತ ಬಂದೆ. ಬಂದು ಇವರು ಎಲ್ಲಿ ಸೇರಿದ್ದಾರೋ ಅಲ್ಲೇ ಸೇರಿದ್ದೇನೆ. ಇನ್ನೇನಾಗಬೇಕು? ನಾನು ಅವರ ಮುಖ ನೋಡುವುದನ್ನು ನಿಲ್ಲಿಸಿದೆ. ನನಗೇನಿದೆ ಇವರ ಜತೆ? ಇಲ್ಲಿ ಎಲ್ಲವೂ ನ್ಯಾಯಯುತವಾಗಿಯೇ ನಡೆಯುತ್ತದೆ. ಎಲ್ಲವೂ ಪಾರದರ್ಶಕ. ಆಹಾ! ಹೆಸರಿನ ಫಲಕ ಕೂಡ ಪಾರದರ್ಶಕ! ಅದರ ಮೂಲಕ